## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ ಮುಳಬಾಗಿಲು

## ಅಪರಾಧಿಕ ಪ್ರಕರಣ ಸಂಖ್ಯೆ.1249/2021

| | | |
|---|---|---|
| ಫಿರ್ಯಾದುದಾರರು | : | ಶ್ರೀಮತಿ ಶ್ರೀಲೇಖಾ ಜಿ., 26 ವರ್ಷ,<br>ಕೋಂ: ಮಂಜುನಾಥ,<br>ಸೀರೆ ವ್ಯವಹಾರಸ್ಥ,<br>ವಾಸ: ಮುತ್ಯಾಲಪೇಟೆ,<br>ಪ್ರಥಮ ದರ್ಜೆ ಕಾಲೇಜು ಹಿಂಭಾಗ,<br>ಮುಳಬಾಗಿಲು ನಗರ, ಕೋಲಾರ ಜಿಲ್ಲೆ. |

-ವಿರುದ್ಧ-

| | | |
|---|---|---|
| ಆರೋಪಿ | : | ಶ್ರೀಮತಿ ನವೀತಾ, 35 ವರ್ಷ,<br>ಕೋಂ: ಅಮರನಾಥ್,<br>ವಾಸ: ಶ್ರೀ ಸಾಯಿ ಪುಡ್ ಇಂಡಸ್ಟ್ರೀಸ್,<br>ಮೇಲಗಾಣಿ ಗ್ರಾಮ, ಎಮ್ಮೆನತ್ತ ಅಂಚೆ,<br>ಮುಳಬಾಗಿಲು ತಾಲೂಕು,<br>ಕೋಲಾರ ಜಿಲ್ಲೆ. |

- - -

### ದಂಡ ಪ್ರಕ್ರಿಯೆ ಸಂಹಿತೆ ಕಲಂ- 313 ರ ರೀತ್ಯಾ ಆರೋಪಿಯ ಹೇಳಿಕೆ

**ಪ್ರಶ್ನೆ.1:** ನೀವು ಸಾಕ್ಷಿ ವಿಚಾರಣೆ ಕೇಳಿದ್ದಿರಾ?

ಉತ್ತರ:

**ಪ್ರಶ್ನೆ.2:** ಪ್ರಾಸಾ-1 ಶ್ರೀಮತಿ ಶ್ರೀಲೇಖಾ ಜಿ., ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಅವರಿಂದ ಪಡೆದುಕೊಂಡ ಹಣವನ್ನು ಮರು-ಪಾವತಿ ಮಾಡುವ ಸಲುವಾಗಿ ರೂ.2,00,000/-ಗಳಿಗೆ ಮುಂದಿನ ದಿನಾಂಕ ನಮೂದಿಸಿದ ದಿ:25.03.2021 ಮುಳಬಾಗಿಲು ಶಾಖೆಯ ಕೆನರಾ ಬ್ಯಾಂಕಿನ ಚೆಕ್ ನಂ.904798 ನ್ನು ಅವರ ಹೆಸರಿಗೆ ನೀಡಿರುತ್ತೀರಿ ಅಂತ ಹೇಳುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

**ಪ್ರಶ್ನೆ.3:** ಪ್ರಾಸಾ-1 ರವರು ಪುನಃ ತಮ್ಮ ಸಾಕ್ಷ್ಯದಲ್ಲಿ, ಸದರಿ ಚೆಕ್ ಅನ್ನು ನಗದೀಕರಣಗೊಳಿಸಲು ಫಿರ್ಯಾದಿಯು ಮುಳಬಾಗಿಲು ನಗರ ಶಾಖೆಯ ಐ.ಓ.ಬಿ ಬ್ಯಾಂಕ್ ಇಲ್ಲಿಗೆ ಹಾಜರುಪಡಿಸಿದಾಗ, ಸದರಿ ಚೆಕ್ 'ಸಾಕಷ್ಟು ಹಣವಿಲ್ಲ' ಎಂಬ ಕಾರಣಕ್ಕಾಗಿ ಅನಾಧರಣಗೊಂಡಿರುತ್ತದೆ ಅಂತ ಹೇಳುತ್ತಾರೆ. ಈ ಬಗ್ಗೆ ತಾವು ಏನು

ಹೇಳುವಿರಿ?

ಉತ್ತರಃ

**ಪ್ರಶ್ನೆ.4:** ಪ್ರಾಸಾ-1 ರರು ಪುನಃ ತಮ್ಮ ಸಾಕ್ಷ್ಯದಲ್ಲಿ, ಚೆಕ್ ಅನಾಧರಣಗೊಂಡ ಬಗ್ಗೆ ಫಿರ್ಯಾದಿಯು ವಕೀಲರ ಮೂಲಕ ಆರೋಪಿಯಾದ ನಿಮಗೆ ದಿಃ26.04.2021 ರಂದು ನೋಟೀಸ್ ನೀಡಿದಾಗ್ಯೂ ಸಹ, ಆರೋಪಿಯಾದ ನೀವು ಚೆಕ್ ಬಾಬ್ತು ಹಣವನ್ನು ಅವರಿಗೆ ಕೊಟ್ಟಿರುವುದಿಲ್ಲ ಎಂದೂ, ಆ ಕಾರಣದಿಂದ ನಿಮ್ಮ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿರುತ್ತಾರೆ ಅಂತ ಹೇಳುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರಃ

**ಪ್ರಶ್ನೆ.5:** ಪ್ರಾಸಾ-1 ರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಇದುವರೆವಿಗೂ ಸಹ ಚೆಕ್ ಬಾಬ್ತು ಹಣವನ್ನು ಮರು-ಪಾವತಿಸಿರುವುದಿಲ್ಲ ಹಾಗೂ ಆರೋಪಿಯಾದ ನೀವು ಅವರಿಗೆ ಮೋಸ ಮಾಡುವ ಉದ್ದೇಶದಿಂದಲೇ ಈ ರೀತಿಯ ಚೆಕ್ ಅನ್ನು ಅವರಿಗೆ ಕೊಟ್ಟಿರುತ್ತೀರಿ, ಆದುದರಿಂದ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ- **138** ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆ ಅಂತ ಹೇಳುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರಃ

**ಪ್ರಶ್ನೆ.6:** ಈ ಕೇಸಿನಲ್ಲಿ ನೀವು ಹೆಚ್ಚಿಗೆ ಏನಾದರೂ ಹೇಳುವುದು ಇದೆಯೇ?

ಉತ್ತರಃ

**ಪ್ರಶ್ನೆ.7:** ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಕೇಳಿ, ಆತ ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕಃ 14 ನೇ ಅಕ್ಟೋಬರ್, 2025.

(ಹರೀಶ್ ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಮುಳಬಾಗಿಲು.

Visit **ecourts.gov.in** for updates or download mobile app "**eCourts Services**" from Android or iOS